ನನಗಾದ ಪ್ರಮಾಣದಲ್ಲಿ, ಸ್ವರೂಪದಲ್ಲಿ ನಾನು ಮಾಡುತ್ತಲೇ ಬಂದಿದ್ದೆ.

◆ **ನಿಮ್ಮ ಮನೆಯವರು ನಿಮ್ಮ ಈ ತೀರ್ಮಾನವನ್ನು ಒಪ್ಪಿದರಾ?**

ಖಂಡಿತಾ, ನನ್ನ ಮನೆಯವರು ಇನ್ನೂ ಒಂದು ಮಾತು ಹೇಳಿದ್ರು, ನಿನಗೆ ಯಾವಾಗಲಾದರೂ ಮದುವೆಯಾಗಬೇಕು ಅಂತ ಅನ್ನಿಸಿದಾಗ ಹೇಳು, ಅವರು ಯಾವ ಜಾತಿ, ಧರ್ಮದವರೇ ಆಗಿರಲಿ ನಾವು ಒಪ್ಪಿ ಮದುವೆ ಮಾಡ್ತೀವಿ ಅಂತ.

◆ **ಶೆಲತ್ ಅನ್ನೋದು ಜಾತಿಯ ಸೂಚಕವೆ? ನಿಮ್ಮ ಗಂಡ, ಮದುವೆಯ ಬಗ್ಗೆ ಸ್ವಲ್ಪ ಹೇಳಿ.**

ಹೌದು, ಶೆಲತ್ ಅನ್ನೋದು ಬ್ರಾಹ್ಮಣ ಜಾತಿ. ವಿನೋದ್ ಮೆಘಾನಿ ಬನಿಯಾ ಜಾತಿಗೆ ಸೇರಿದವರಾಗಿದ್ದರು.

◆ **ಹೇಗಿತ್ತು ನಿಮ್ಮ ಸಂಬಂಧ? ನೀವು ಸಂಗಾತಿಗಳ ತರಾ ಇದ್ರಿ ಅನ್ನಿಸುತ್ತೆ.**

ಹೌದೇ ಹೌದು. ಆದರೆ ನಮ್ಮ ಹಿತೈಷಿಗಳೊಬ್ಬರು 'ನಿಮ್ಮ ಮಟ್ಟಿಗೆ ಸರೀನೇ ಇರಬಹುದು, ಆದರೆ ನೀವಿಬ್ಬರೂ ಹಳ್ಳಿಗಳಿಗೆ ತುಂಬಾ ಹೋಗ್ತಾ ಇರ್ತೀರಾ, ಅದ್ರಿಂದ ಮದುವೆ ಮಾಡಿಕೊಳ್ಳೋದು ಒಳ್ಳೇದು ಅಂತ' ಎಂದರು. ಹಾಗಾಗಿ ಐನೂರು ರೂಪಾಯಿ ಖರ್ಚು ಮಾಡಿ ನಾವು ರಿಜಿಸ್ಟರ್ ಮದುವೆ ಆದ್ವಿ. ನನಗೆ 47 ವರ್ಷ ಆದಾಗ ನಾವು ಮದುವೆಯಾದದ್ದು. ನಾವಿಬ್ಬರೂ ಭೇಟಿಯಾದದ್ದು ನಂದಿಗ್ರಾಮದಲ್ಲಿ. ನಮ್ಮಿಬ್ಬರ ಬದುಕಿನ ದಾರಿಗಳೂ ಒಂದೇ ಆದದ್ದರಿಂದ ನಾವು ಒಟ್ಟಿಗೆ ಬದುಕುವ ತೀರ್ಮಾನ ಮಾಡಿದ್ವಿ.

◆ **ನೀವಿಬ್ಬರೂ ಕಳೆದ ರೊಮ್ಯಾಂಟಿಕ್ ಗಳಿಗೆಗಳ ಬಗ್ಗೆ ಹೇಳಿ.**

ನಮ್ಮಿಬ್ಬರ ಬದುಕೇ ರೊಮ್ಯಾಂಟಿಕ್ ಅನ್ನಬಹುದೇನೋ.

◆ **ಜಗಳ ಆಡ್ತಾ ಇದ್ರಾ?**

ಸಿಕ್ಕಾಪಟ್ಟೆ. ಈ ವಿಷಯದಲ್ಲಿ ನಾವಿಬ್ಬರೂ ಸಮಬಲಶಾಲಿಗಳು. ಸ್ವಾರಸ್ಯ ಅಂದರೆ, ನಮ್ಮ ಪೆಟ್‌ಗಳು ನಮ್ಮ ಜಗಳವನ್ನ ನಿಲ್ಲಿಸ್ತಾ ಇದ್ದವು. ಅವು ಬಂದು ನಮ್ಮ ಬಳಿ ಕೂತು, ನಮ್ಮನ್ನು ನೆಕ್ಕಿ ನಮ್ಮಿಬ್ಬರ ನಡುವೆ ಸಂಧಾನ ಮಾಡಿಸ್ತಾ ಇದ್ದವು.

◆ **ಪ್ರಾಣಿಗಳ ಜೊತೆ ನಿಮ್ಮದು ಕರುಳಬಳ್ಳಿಯ ಸಂಬಂಧ ಅಲ್ಲವೆ?**

ಅಂದಿನಿಂದ ಇಂದಿನತನಕ ನನಗೆ ಅವುಗಳ ಜೊತೆ ಸ್ನೇಹದ, ಪ್ರೀತಿಯ ಸಂಬಂಧವಿದೆ. ಈಗಲೂ ನನ್ನ ಮನೇಲಿ 15 ಬೆಕ್ಕುಗಳಿವೆ. ಈಗಷ್ಟೇ ಫೋನ್ ಮಾಡಿದ್ದ ಸವಿತಾ ಬೆನ್, ಯಾವೆಲ್ಲ ಬೆಕ್ಕು ಬಂದು ಊಟ ಮಾಡಿತು, ಯಾವುದು ಮಾಡಲಿಲ್ಲ ಅಂತ ಹೇಳ್ತಾ ಇದ್ರು. ಅವರಿಲ್ಲದೆ ನನ್ನ ಬದುಕನ್ನ ಕಲ್ಪಿಸಿಕೊಳ್ಳಲಾರೆ. ನನ್ನ ಹತ್ತಿರ ಸೋನು ಅಂತ ಒಂದು ನಾಯಿ ಇತ್ತು. ಅದು ಸಾಯುವ ಹೊತ್ತಿನಲ್ಲಿ ಅದನ್ನು ಬದುಕಿಸಿಕೊಳ್ಳಲು ನಾವು ಏನೆಲ್ಲ ಪ್ರಯತ್ನ ಮಾಡಿದೆವು... ಉಳಿಸಿಕೊಳ್ಳಲಾಗಲಿಲ್ಲ (ಸೋನುವನ್ನು ನೆನಪಿಸಿಕೊಂಡು ಅಕ್ಷರಶಃ ಹಿಮಾಂಶಿ ಅತ್ತರು).

ವಿನೋದ್ ನನ್ನ ಜೊತೆಗೂಡಿದ್ದರಿಂದ ನಾವು 'ಶಿಶು ಸಹಾಯ್', 'ಸೇತು' ಇವುಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ವಿನೋದ್ ತೀರಿಕೊಂಡ ಮೇಲೆ ನಾನು ಸೇತು ಮುಚ್ಚಬೇಕಾಯಿತು.

◆ **ಯಾವಾಗ ನೀವು ಇದನ್ನೆಲ್ಲ ಆರಂಭಿಸಿದ್ದು?**

ಎಂಬತ್ತರ ದಶಕದಲ್ಲೇ ನಾನು ಆರಂಭಿಸಿದ್ದೆ.

◆ **ನೀವು ಏಕಾಂಗಿಯಾಗಿ ನಡೆಸ್ತಾ ಇದ್ರಾ? ಅಥವಾ ಟ್ರಸ್ಟ್ ಮೂಲಕವೆ?**

ಆರಂಭದಲ್ಲಿ ನನ್ನ ವಿದ್ಯಾರ್ಥಿಗಳು ನನ್ನ ಜೊತೆ ಇದ್ದರು. ಮತ್ತು ಸೂರತ್‌ನಲ್ಲಿ ಅನೇಕ ದಾನಿಗಳಿದ್ದಾರೆ. ಅಂತಹ ದಾನಿಗಳ ಕಾರಣಕ್ಕಾಗಿಯೇ ನನ್ನ ಯಾವ ಕೆಲಸವೂ ಅಪೂರ್ಣವಾಗಿ ಉಳಿಯಲಿಲ್ಲ. ಆಮೇಲೆ ನನ್ನ ಜೊತೆ ವಿನೋದ್, ನನ್ನ ಗಂಡ ನನ್ನ ಜೊತೆಗೂಡಿದರು.

◆ **ನಿಮ್ಮ ಕಥೆಗಳನ್ನು ಕನ್ನಡಕ್ಕೆ ತಂದಿರುವ ಅಗ್ರಹಾರ ಕೃಷ್ಣಮೂರ್ತಿ ಅವರು ನಿಮ್ಮ ಮಾವನ ಬಗ್ಗೆ ಹೇಳುತ್ತಿದ್ದರು...**

ಅವರೊಬ್ಬ ಗುಜರಾತಿನ ಮುಖ್ಯವಾದ ವ್ಯಕ್ತಿ

